# ಹಾನಗಲ್ಲ ಪರಿಸರದ ಎರಡು ಅಪ್ರಕಟಿತ ಪೆಣ್ಬುಯಲ್ ಶಾಸನಗಳು

ದೇವರಡ್ಡಿ ಹದ್ಲಿ
ಸಂಶೋಧನ ವಿದ್ಯಾರ್ಥಿ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

## ABSTRACT:

ಪ್ರಾಚೀನ ಕರ್ನಾಟಕದಲ್ಲಿ ವೀರ ಮೌಲ್ಯವು 10ನೇ ಶತಮಾನದ ಯುಗ ಧರ್ಮವಾಗಿತ್ತು ಅಂತೆಯೇ ಪಂಪ ರನ್ನ ಜನ್ನ ಮೊದಲಾದ ಕವಿಪುಂಗವರು ತಮ್ಮ ಕಾವ್ಯಗಳಲ್ಲಿ ಅಂದಿನ ಸಾಮಾಜಿಕ ಪರಿಸರದಲ್ಲಿ ಪ್ರಚಲಿತದಲ್ಲಿದ್ದ ಆಚರಣೆ-ಸಂಸ್ಕೃತಿಯನ್ನು ಸಮದಂಡಿಯಾಗಿ; ಸಂದರ್ಭ ಸಿಕ್ಕಾಗಲೆಲ್ಲ ಉಲ್ಲೇಖಿಸಿದ್ದಾರೆ. ಅಂಥ ಪ್ರಸಂಗಗಳಲ್ಲಿ ಅಂದಿನ ಸಮಾಜದ ಧ್ಯೇಯ-ಧೋರಣೆಗಳು ಏನಾಗಿದ್ದವು ಎಂಬುದರ ಸ್ಪಷ್ಟವಾದ ಪರಿಕಲ್ಪನೆ ನಮಗೆ ದೊರಕುತ್ತದೆ. ಪಾನುಂಗಲ್ಲಯ್ನೂಱು ಪರಿಸರದ ಶಾಸನಗಳು ಇಂಥ ಅನೇಕ ಪ್ರಸಂಗಗಳನ್ನು ಉಲ್ಲೇಖಿಸಿವೆ. ಪ್ರಸ್ತುತ ಅಂಥ ಸಾಮಾಜಿಕ ದುರ್ಭರ ಪರಿಸ್ಥಿತಿಯಲ್ಲಿ ಹೋರಾಡಿ 'ಸ್ತ್ರೀಯರ ಮಾನ' ರಕ್ಷಣೆ ಮಾಡಿ ಹೋರಾಡಿ ಮಡಿದ ಇಬ್ಬರೂ ಯೋಧರ ಅಪ್ರಕಟಿತ ವೀರಗಲ್ಲಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇನೆ.

## KEYWORDS:

ಕನ್ನಡ ಕಾವ್ಯ, ಹಾನಗಲ್ಲ, ಪೆಣ್ಬುಯಲ್ ಸ್ವರೂಪ, ಶಾಸನಗಳು, ಕವಿಚಕ್ರವರ್ತಿ.

ಕನ್ನಡದಲ್ಲಿ ಕವಿಚಕ್ರವರ್ತಿಯಂದು ಪ್ರಸಿದ್ಧನಾದ ರನ್ನ ತನ್ನ 'ಸಾಹಸಭೀಮ ವಿಜಯಂ' ಕಾವ್ಯದ ಒಂದು ಪ್ರಸಂಗದಲ್ಲಿ:

**ತುಱುಗೊಳೋಳ್ ಪೆಣ್ಬುಯ್ಯಲೊ**
**ಳೆಱಿವೆಸದೊಳ್ ನಂಟನೆಡಱೊಳೂರಱಿವಿನೊಳ**
**ತಱಿಸಂದುದು ಗಂಡುತನಮನೆ**
**ನೆಱಪದವಂ ಗಂಡನಲ್ಲನೆಂತುಂ ಷಂಡಂ ॥**[1]

ಎಂದು ಹೇಳುತ್ತಾನೆ. "ತುಱುಗೊಳ್, ಪೆಣ್ಬುಯ್ಯಲ್, ಎಱಿವೆಸ, ನೆಂಟನೆಡಱು, ಊರಱಿವು ಪ್ರಸಂಗಗಳಲ್ಲಿ ಹೋರಾಡದವನು ಷಂಡ" ಎಂಬ ಮಾತು, ಆ ಕಾಲದ ಮೇಲ್ಕಂಡ ಘಟನೆಗಳಿಗೆ ಸಮಾಜ ಹೇಗೆ ಸ್ಪಂದಿಸುತ್ತಿತ್ತೆಂದು ತಿಳಿದು ಬರುತ್ತದೆ. ಇಂತಹ ಪ್ರಸಂಗಗಳಲ್ಲಿ ಹೋರಾಡದೆ ಇರುವವನು ಗಂಡಸೇ ಅಲ್ಲವೆಂಬ ವೀರ-ಶೌಚ ಭಾವನೆಯು ವ್ಯಕ್ತವಾಗುತ್ತದೆ. ಇಂಥ ಪ್ರಸಂಗಗಳ ಪರಿಣಾಮ ಸಮಾಜದ

ಮೇಲೆ ಭೀಕರವಾಗಿರುತ್ತಿತ್ತೆಂಬ ವಾಸ್ತವ ಸತ್ಯವನ್ನೂ ಎತ್ತಿ ತೋರಿಸುತ್ತದೆ.

ಪೆಣ್ಬುಯ್ಯಲ್ ಎಂಬ ಪದವು ಪೆಣ್ + ಪುಯ್ಯಲ್ ಎಂಬ ಎರಡು ಶಬ್ದಗಳಿಂದ ಕೂಡಿದ್ದಾಗಿದ್ದು ಹೆಣ್ಣಿನ ಕೂಗು, ಹೆಣ್ಣಿನ ಆಕ್ರಂದನ ಎಂಬುದನ್ನು ಹೇಳುತ್ತದೆ. ಆದರೆ ಯಾವ ಶಾಸನಗಳಲ್ಲೂ ಪೆಣ್ಬುಯ್ಯಲ್ ಎಂಬ ಪದ ಬಳಕೆಯಾಗಿಲ್ಲ. ಇದರ ಬದಲಿಗೆ ಪೆಣ್ಡಿರುಡೆಯುರ್ಚ, ಪೆಣ್ಡಿರ ಉಡೆ ಉರ್ಚ್ಚಲು, ಉಡೆ ಉರ್ಚ್ಚಿ, ಪೆಣ್ಡಿರ ಪೆರಗಿಕ್ಕಿ, ಹೆಂಡಿರುಡೆಯುರ್ಚ್ಚಿ ಎಂಬ ಶಬ್ದಗಳು ಬಳಕೆಯಾಗಿವೆ. ಕೆಲವು ಶಾಸನಗಳಲ್ಲಿ ಹೆಣ್ಣು ಸೆರೆಯನ್ನು ಬಿಡಿಸಿದನು ಎಂಬ ಶಬ್ದವೂ ಬಳಕೆಯಾಗಿದೆ. ಉಡೆ ಉರ್ಚ್ಚು ಎಂದರೆ ಉಟ್ಟ ಬಟ್ಟೆಯನ್ನು ಸೆಳೆ, ನಗ್ನ ಮಾಡು ಎಂದು ಅರ್ಥ. ವಿದ್ವಾಂಸರೊಬ್ಬರು ಈ ಶಬ್ದಕ್ಕೆ ವಿಧವೆಯನ್ನಾಗಿ ಮಾಡುವುದೆಂದೂ ಅರ್ಥೈಸಿದ್ದಾರೆ.[2]

**ಕಾವ್ಯಗಳಲ್ಲಿ ಉಕ್ತವಾದ ಪೆಣ್ಬುಯ್ಯಲ್ ಸ್ವರೂಪ:**

ಅನೇಕ ಕನ್ನಡ ಕಾವ್ಯಗಳಲ್ಲೂ ಪೆಣ್ಬುಯ್ಯಲಿನ ಪ್ರಸಂಗಗಳಿವೆ. ನಾಗಚಂದ್ರನು ತನ್ನ 'ರಾಮಚಂದ್ರ ಚರಿತ ಪುರಾಣಂ' ಕಾವ್ಯದಲ್ಲಿ –ರಾವಣನು ಸೀತೆಯನ್ನು ಅಪಹರಿಸಿದಾಗ

**'ಸತಿ ಪುಯ್ಯಲ್ಚಿದಪಳ್ ರಘೂದ್ವಹ ಕುಲಸ್ತ್ರೀ ಸೀತೆ ಪೆಣ್ಬುಯ್ಯಲಂ**
**ಶ್ರುತಿ ಕಯ್ಕೊಂಡುದು ಕೇಳ್ದಿದಂ ತೆವಳೆಗಂಡಂದೆನ್ನ ವಿಖ್ಯಾತಿ ದೂ**
**ಷಿತಮಕ್ಕುಂ ಸೆಜೆಗೊಂಡನಂ ಕದನದೊಳ್ ಬೆಂಕೊಂಡು ಬಾಹಾಬಲೋ**
**ನ್ನತಿಯಂ ಬೀಜಿವೆನೆಂದು ಘೂರ್ಮಿಸಿದನೇಂ ಗಂಡಂ ಪರಿಚ್ಚೇದಿಯೋ ॥9–44॥[3]**
**ಅಂತು ಪರಿಚ್ಛೇದಿಸಿ ರತ್ನಜಟಿ ಬದ್ಧಭ್ರುಕುಟಿ ದಶಾನನ ವಿಮಾಕ್ಕಡ್ಡಂ ಬಂದು**

ಎಂದು ಕವಿ ವರ್ಣಿಸಿರುವನು.

''ಸೀತೆಯ ದುಃಖವು ಕೈ ಮೀರಲು, ದಿಕ್ಕುಗಳನ್ನು ಹಾ ಹಾ ರವ(ಶಬ್ದವು) ತುಂಬಲು, ಕಣ್ಣೀರು ಮತ್ತು ಬೆವರುಗಳಿಂದ ದೇಹ ಕರಗಿ ನೀರಾಗಿ ಉಕ್ಕುವಂತಾಗಲು; ಹೊಟ್ಟೆಯ ಮೇಲೆ ಹೊಡೆದುಕೊಳ್ಳುತ್ತ, 'ಪರಸ್ತ್ರೀ ಯಾದ ನನ್ನನ್ನು ಕದ್ದುಕೊಂಡು ಈ ಖಳನು(=ದಶಾನನ ರಾವಣ) ಹೋಗುತ್ತಿರುವನು. ಯಾರನ್ನು ಶರಣು ಹೋಗಲಿ' ಎನ್ನುತ್ತ ಸೀತೆ ಹುಯ್ಯಲಿಟ್ಟಳು. 'ಧರಣೀ ರಕ್ಷಣದಲ್ಲಿ ದಕ್ಷ ಬಲಭುಜವುಳ್ಳ ಲಕ್ಷ್ಮಣನು ನನ್ನ ಮೈದುನನು. ಹರಿವಂಶದ ಜನಕನು ನನ್ನ ಜನಕನು. ವೀರ ಪ್ರಭಾಮಂಡಲನು ನನ್ನ ಹಿರಿಯಣ್ಣನು, ರಘುರಾಮನ ಸತಿಯಾದ ನನ್ನನ್ನು, ಸೀತೆಯನ್ನು ಪಾತಕನು ಯೋಗ್ಯತೆಗೆಟ್ಟು ತೆಗೆದುಕೊಂಡು ಹೋಗುತ್ತಿರುವನು, ಏನು ಮಾಡಲೆಂದು ಸೀತೆ ಹಾ ಹಾ ಕ್ರಂದನವನ್ನು ಮಾಡಿದಳು. ತತ್ಸಂದರ್ಭದಲ್ಲಿ ಆ ಶಬ್ದವನ್ನು ಅರ್ಕಜಟಿಯ ಮಗನಾದ ರತ್ನಜಟಿಯು ಕೇಳಿ ಹುಬ್ಬುಗಂಟಿಕ್ಕಿ ರಾವಣನ ವಿಮಾನಕ್ಕೆ ಅಡ್ಡಬಂದು. ಧರ್ಮವನ್ನು ತ್ಯಜಿಸಿ, ಭೂಚರ ಖೇಚರ ಚಕ್ರವರ್ತಿ ರಾವಣ ನೀನು ಈ ಪರಸ್ತ್ರೀಗೆ

ಆಸೆ ಪಡುವುದು ಇಹಪರಗಳೆರಡನ್ನೂ ನಾಶ ಮಾಡಿಕೊಂ ಡಂತೆ. ನಿನ್ನ ಮಹಿಮೆಗೆ ಇದು ನಡತೆಯೆ' ಎಂದು ಮೂದಲಿಸಿ ಹತ್ತಿರ ಬಂದನು" ಎಂಬುದು ಈ ಪದ್ಯದ ಆಶಯ.

ಅನಂತರ ದಾನವನಾದ ನಿರಂಕುಶ ರಾವಣನು ಅರ್ಕಜಟಿಯ ವಾವೆ(=ನೆಂಟ) ಯಿಂದ ಅವನೊಡನೆ ಯುದ್ಧ ಮಾಡದೆ; ಕರುಣಿಸಿ, ಅವನ ವಿದ್ಯಾಚ್ಛೇದವನ್ನುಂಟುಮಾಡಿದನು. ರತ್ನಜಟಿಯ ಆತ್ಮವಿದ್ಯಾಢಂಬರ ಅಸ್ತಮಿಸಲು ಆಕಾಶದಿಂದ ಬಿದ್ದು ಮೂರ್ಛಹೋಗಿ ಕಂಬುದ್ವೀಪದಲ್ಲಿ, ರೆಕ್ಕೆ ಮುರಿದ ಪಕ್ಷಿಯಂತೆ ಶಕ್ತಿಗುಂದಿದ್ದನು. ಹೀಗೆ ಅರ್ಕಜಟಿಯು ಸೀತೆಯನ್ನು ಕಾಪಾಡಲು ಹರಸಾಹಸ ಪಟ್ಟು ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಮೂಲ ವಾಕ್ಮೀಕಿ ರಾಮಾಯಣದಲ್ಲಿ ರಾವಣನ ಕೈಯಿಂದ ಈ ಜಟಾಯು ಪಕ್ಷಿಯು ಹತವಾಗುತ್ತದೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪೆಣ್ಬುಯಲ್‌ನ ಮೊದಲ ಉಲ್ಲೇಖ ನಾಗಚಂದ್ರನ 'ರಾಮಚಂದ್ರ ಪುರಾಣಂ' ಕಾವ್ಯದಲ್ಲಿ ದೊರೆಯುತ್ತದೆ.

ಶಾಸನಗಳಲ್ಲಿ ಅಂತರ್ಗತವಾದ ಪೆಣ್ಬುಯ್ಯಲ್ನ ಅರ್ಥ ಇಲ್ಲಿಯೂ ಮೂಡಿದೆ. ಅಗ್ಗಳದೇವನು ತನ್ನ 'ಚಂದ್ರಪ್ರಭ ಪುರಾಣಂ' ಕಾವ್ಯದಲ್ಲಿ ಪೆಣ್ಬುಯ್ಯಲಿನ ಪ್ರಸಂಗಗಳನ್ನು ಈ ಕೆಳಗಿನಂತೆ ಚಿತ್ರಿಸಿದ್ದಾನೆ.

**ಗದ್ಯಭಾಗದಲ್ಲಿ:**

**"ಮತ್ತೊಂದು ಸುರತಕರಣ ಚಿತ್ರ ಸಂದರ್ಭವಪ್ಪ ಗರ್ಭಗೃಹದೊಳಗೆ ನಿರ್ಭರ ಪ್ರಣಯ ಪರವಶತೆಯಿಂ ನೆರೆವ ಕಾದಲರ ಕಾಮಕೇಳೀಕೂಜಿತದೊಳ್ ಕೂಡಿ ಕಿವಿಯಿಂ ಪಳಂಚಲೆವ ಮಂಚದ ಶಕುನಿಯಂಚೆಯ ಗಿಳಿಯ ಪುರುಳಿಯ ಪಾರಿವದ ಕೊರಲುಲಿಯ ದಳವುಳವನಾಲಿಸಿ ಪೆಣ್ಬುಯ್ಯಲನಾರಯ್ಯ ದೋಸರಿಪುದೆನ್ನ ಗಂಡುಗೂಸುತನಕ್ಕೆ ಪಸುಗೆಯಲ್ತೆಂದು ಪೀಠಮರ್ದಕಂ ಬೆರಸು ಪರಿದು ಗವಾಕ್ಷೆ ನಿಕ್ಷಿಪ್ತಾಕ್ಷನಾಗಿ ನೋಟ್ಪನ್ನೆಗಂ"[4]**

ಎಂದಿರುವನು.

ಗಿಳಿಯಂತೆ, ಸಾರಿಕೆಯಂತೆ, ಪಾರಿವಾಳದಂತೆ ಚೀತ್ಕಾರ ಮಾಡುವ ಹೆಣ್ಣಿನ ಕೊರಳುಲಿಯ ಹುಯಿಲನ್ನು ಕೇಳಿ 'ಹೆಣ್ಣಿನ ಹುಯಿಲನ್ನು ಕೇಳಿ ವಿಚಾರಿಸದೆ ಹೋಗುವುದು ನನ್ನ ಗಂಡಸುತನಕ್ಕೆ ಭೂಷಣವಲ್ಲ ಎಂದು ಸಹಾಯಕನಾದ ಪೀಠಮರ್ದಕನೊಡನೆ ಹೋಗಿ ಗವಾಕ್ಷಿಯಲ್ಲಿ ನೋಡುವಾಗ' ಎಂದು ಇದರ ಅರ್ಥ. ಆದರೆ ಈ ಪೆಣ್ಬುಯ್ಯಲ್ ಸುರತದ ಆನಂದದ ಚೀತ್ಕಾರ. ವೀರಗಲ್ಲುಗಳಲ್ಲಿ ಕಾಣುವ ಅಸಹಾಯಕ ಹೆಣ್ಣುಗಳ ಆಕ್ರಂದನವಲ್ಲ. ಜನ್ನ ತನ್ನ 'ಅನಂತನಾಥ ಪುರಾಣಂ' ಕಾವ್ಯದಲ್ಲಿಯ ಪೆಣ್ಬುಯ್ಯಲು ಪ್ರಸಂಗ ಹೀಗಿದೆ.

**ಇನನಂ ವಂಚಿಸಿ ಚಂಡಶಾಸನನವಂ ಕಳ್ದೊಯ್ದಪಂ ನಾಥನಂ**
**ಗನೆಯಿಂದೆನ್ನ ಸುನಂದೆಯಂ ಸುಭಟರಣ್ಮಿಂ ವೀರರಡ್ಡೈಸಿಮೆ**
**ನ್ನಿನಿಯಂಗೆಯ್ದಿಸಿಮೂರನಾಡಜನಮೀ ಪೆಣ್ಬುಯ್ಯಲಂ ಹಾ ಸುಷೇ**
**ಣನೃಪ ಹಾ ನೃಪ ನೀಱನೆಂದಬಲೆ ಬಾಯ್ವಿಟ್ಟಟ್ಟು ಪುಯ್ಯಲ್ಚಿದಳ್॥**[5]

ಶಾಸನಗಳಲ್ಲಿ ಅಂತರ್ಗತವಾದ ಪೆಣ್ಬುಯ್ಯಲ್ನ ಅರ್ಥ ಇಲ್ಲಿಯೂ ಮೂಡಿದೆ. ಮೇಲ್ಕಂಡ ಎಲ್ಲಾ ಕಾವ್ಯ ಪೆಣ್ಬುಯ್ಯಲ್ ಪ್ರಸಂಗಗಳನ್ನು ಗಮನಿಸಿದರೆ; ಶಾಸನಗಳಲ್ಲಿಯ ಪೆಣ್ಬುಯ್ಯ ಪ್ರಸಂಗಗಳಿಗೆ ಹೋಲಿಕೆಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಎರಡೂ ಹೆಣ್ಣಿನ ಕೂಗೇ ಆದರೂ ಸಂದರ್ಭಗಳು ಬೇರೆ ಬೇರೆಯಾಗಿವೆ. ಕಾವ್ಯಗಳಲ್ಲಿ ಸುಖದ ಪರಾಕಾಷ್ಠೆ ಮತ್ತು ಭಯದ ಕೂಗುಗಳಾದರೆ ಶಾಸನಗಳಲ್ಲಿ ಮಾನ ರಕ್ಷಣೆಯ ಮತ್ತು ಪ್ರಾಣ ರಕ್ಷಣೆಯ ಕೂಗಾಗಿದೆ. ಉಗ್ರತೆ ಮತ್ತು ಭೀಕರತೆಯ ಪರಿಣಾಮಗಳಿಂದ ಶಾಸನಗಳಲ್ಲಿಯ ಪೆಣ್ಬುಯ್ಯಲ್ ಪದವು ಹೆಚ್ಚು ಗಂಭೀರವಾಗುತ್ತದೆ.

**ಶಾಸನಗಳಲ್ಲಿ ಪೆಣ್ಬುಯ್ಯಲ್‌ನ ಸ್ವರೂಪ:**

"ಕನ್ನಡದಲ್ಲಿ ಈವರೆಗೆ ಪೆಣ್ಬುಯ್ಯಲ್ಗೆ ಸಂಬಂಧಿಸಿದ 46 ಶಾಸನಗಳು ಲಭ್ಯವಾಗಿವೆ. ಊರಳಿವಿನ ಸಮಯದಲ್ಲೇ ಹೆಚ್ಚು ಉಡೆಉರ್ಚ್ಚುವ ಪ್ರಸಂಗಗಳಾಗುತ್ತಿದ್ದವು. ಕಾರಣ ಗ್ರಾಮ-ಗ್ರಾಮಗಳ ನಡುವಿನ, ಕುಟುಂಬ – ಕುಟುಂಬಗಳ ನಡುವಿನ ದ್ವೇಷದಲ್ಲಿ ವ್ಯಕ್ತಿಗತ ದ್ವೇಷ ಹೆಚ್ಚಾಗಿರುತ್ತಿತ್ತು. ಇದು ತೀರ ವೈಯಕ್ತಿಕ ನೆಲೆಗೂ ತಲುಪಿ ಶತ್ರುಗಳ ಹೆಂಡತಿಯರ ಮಾನಭಂಗ ಮತ್ತು ಉಡೆಉರ್ಚ್ಚುವ ಪ್ರಸಂಗಗಳು ನಡೆಯುತ್ತಿದ್ದವು" ಎಂದು ಡಿ. ವಿ. ಪರಮಶಿವಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ.[6]

ಕಾಲದ ದೃಷ್ಟಿಯಿಂದ ಪ್ರಾಚೀನವಾದ ಶಾಸನವೆಂದರೆ ಸೊರಬ ತಾಲೂಕಿನ ಮನೆಮನೆ ಗ್ರಾಮದ ಶಾಸನವಾಗಿದೆ. ರಾಷ್ಟ್ರಕೂಟರ ಅವಧಿಯ ಈ ಶಾಸನವು ಸುಮಾರು ಕ್ರಿ. ಶ. 800ಕ್ಕೆ ಸೇರಿದ್ದು, ಅಜ್ಜಗರನೆಂಬ ವೀರನು ಊರಳಿವಿನ ಸಮಯದಲ್ಲಿ ಸ್ತ್ರೀಯರ ಮಾನಭಂಗಕ್ಕೆ ಪ್ರಯತ್ನಿಸಿದ ಶತ್ರುಗಳ ವಿರುದ್ಧ ಹೋರಾಡಿ ಮಡಿಯುತ್ತಾನೆ. ಅನಂತರ ಪೆಣ್ಬುಯಲ್ ಶಾಸನಗಳು ಕೋಗೋಡಿ, ಆಲತೂರು, ಭರ್ತೂರು, ಬೀರೇದೇವರಗುಡ್ಡ, ಸಾಲೂರು, ಸಂಡ, ಶೀಲವಂತನಕೊಪ್ಪ, ನಂಬಿಹಳ್ಳಿ, ಬೇರಂಬಾಡಿ, ಕೋಗೋಡು, ಹಳೇಬೀಡು, ಭರ್ತೂರು, ಅಡಗಂಟಿ, ನಿಟ್ಟೂರು, ಕಿತ್ತನಕೆರೆ, ತಾಗರ್ತಿ, ಚಿಕ್ಕಮಾಗಡಿ, ತಾಳಗುಂದ, ಅರಸಿನಗುಪ್ಪೆ, ಕಂಬದಹಳ್ಳಿ, ಕೊರಕೋಡು, ಕುಪ್ಪಟೂರು, ಕಾಗಿನೆಲ್ಲಿ, ಮುತ್ತೂರು, ಅಬ್ಬಲೂರು, ಹಿರೇಜಂಬೂರು, ಉದ್ರಿ, ಮದಲೂರು, ತಾವರೆಕೆರೆ, ಹಾಲ್ತೊರೆ, ಬಾಳಂಬೀಡ, ಮುದ್ದೂರ ಇತ್ಯಾದಿ ಪ್ರದೇಶಗಳಲ್ಲಿ ದೊರೆಯುತ್ತವೆ. ಉಪಲಬ್ಧವಾಗಿರುವ ಸಧ್ಯದ ಮಟ್ಟಿಗೆ ಕೊನೆಯ ತೇದಿಯ ಉಲ್ಲೇಖ ಬೇಡರ ಜಕ್ಕನ ನಿಟ್ಟೂರಿನ ಶಾಸನದ್ದಾಗಿದೆ.

ಇದುವರೆಗೂ ಕರ್ನಾಟಕದಲ್ಲಿ 46 ಪೆಣ್ಬುಯಲ್ ಶಾಸನಗಳನ್ನು ವಿದ್ವಾಂಸರು ಗುರುತಿಸಿದ್ದಾರೆ; ಅದಕ್ಕೆ ಹಾನಗಲ್ಲ ಪರಿಸರದ ಈ ಎರಡು ಅಪ್ರಕಟಿತ ಶಾಸನಗಳು ಹೊಸ ಸೇರ್ಪಡೆ.

## 1
## ಮೂಡೂರು
## ಬ್ರಹ್ಮಲಿಂಗೇಶ್ವರ ದೇವಾಲಯದ ಮುಂದಿನ ವೀರಗಲ್ಲು
## ಕ್ರಿ. ಶ. 1126

ಮೂಡೆವೂರ ಗೊಮ್ಮಿಸೆಟ್ಟಿ ಎನ್ನುವವನು ಹೆಣ್ಣುಮಕ್ಕಳ ಮಾನಭಂಗದ ಸಂದರ್ಭದಲ್ಲಿ(ಪೆಣ್ಡಿರುಡೆ ಉರ್ಚ್ಚಲು) ಹೋರಾಡಿ ಸತ್ತುದನ್ನು ದಾಖಲಿಸುತ್ತದೆ. ಶಾಸನದ 3–4 ನೆಯ ಸಾಲುಗಳಲ್ಲಿ ಬರುವ "ಚಾಳುಖ್ಯ ವಿಕ್ರಮಕಾಲದ 50 ಅಯ್ವತ್ತನೆಯ ಪರಾಭವ ಸಂವತ್ಸರದ ಚೈತ್ರ ಸುದ್ಧ 1 ಆದಿವಾರದಂದು" ಎಂಬ ಮಿತಿಯು ಕ್ರಿ. ಶ. 1126ರ ಫೆಬ್ರವರಿ 25ಕ್ಕೆ ಹೊಂದುತ್ತಿದ್ದು, ಗುರುವಾರವಾಗಿದೆ.

**ಮೊದಲನೆಯ ಸ್ತರ:**

1. ಸ್ವಸ್ತಿ ಸಮಧಿಗತ ಪಂಚ ಮಹಾಸ(ಶ)ಬ್ದ ಮಹಾಮಣ್ಡ–
2. ಳೇಸ್ವ(ಶ್ವ)ರ ಬನವಾಸಿ ಪನ್ನಿಚ್ಚಾ(ರ್ಚ್ಛಾ)ಸಿರಮನಾಳುತ್ತಮಿ–
3. ರೆ ಚಾಳುಖ್ಯ(ಕ್ಯ) ವಿಕ್ರಮಕಾಲದ 50 ಅಯ್ವತ್ತನೆ–

**ಎರಡನೆಯ ಸ್ತರ:**

4. ಯ ಪರಾಭವ ಸಂವತ್ಸರದ ಚೈತ್ರ ಸು(ಶು)ದ್ಧ 1 ಆದಿವಾರದಂದು ಮೂ–
5. ಡೆವೂರ ಗೊಮ್ಮಿಸೆಟ್ಟಿ ಪೆಣ್ಡಿರುಡೆ ವುರ್ಚ್ಚಲು ಮಗುಟ್ಟು ಕಾದಿ
6. ಸತ್ತನು ಮಂಗಳ ಮಹಾ ಶ್ರೀ ಶ್ರೀ ಶ್ರೀ[।*]

## 2
## ಹಾವಣಗಿ
## ಕಲ್ಲೇಶ್ವರ ದೇವಾಲಯದ ಎದುರಿನ ವೀರಗಲ್ಲು
## ಕ್ರಿ. ಶ. 1227

ಕಾದಂಬ ಚಕ್ರವರ್ತಿ ಮಲ್ಲಿದೇವನ ಆಡಳಿತಾವಧಿಯಲ್ಲಿ, ಮುಖ್ಯ ಯಕ್ಕ ಸಾಹಣಿ ಬಲುವ ಸಾಹಣಿ ಹಾನುಂಗಲ್ಲ ನಾಡ ಎಡೆವೊಳಲ ಕಂಪಣದ ಬಾಳಿಹಳ್ಳಿಯ ದಾರಿಯಲ್ಲಿ ಬಂದು, ಸುತೆಯನು (ಹೆಣ್ಣುಮಕ್ಕಳು) ಕೊಂಡು ಹೋಹಲ್ಲಿ ಯಲಂಬಿಯ ಸಾವೆಯನಾಯ್ಕನು ವೈರಿಗಳೊಡನೆ ಹೋರಾಡಿ ಆಕಳುಗಳನ್ನು ಮರಳಿತಂದು ಸುರಲೋಕ ಪ್ರಾಪ್ತನಾದನೆಂದು ವಿವರಿಸುತ್ತದೆ. "ಕಾದಂಬ ಚಕ್ರವರ್ತಿ ಮಲ್ಲಿದೇವ

[ವ*]ರ್ಷದ 11ನೆಯ ಸರ್ವ್ವಜಿತು ಸಂವತ್ಸರದ ಚೈತ್ರ ಸು 15 ಬ್ರಿಹವಾರ" ಎನ್ನುವ ಶಾಸನೋಕ್ತ ಮಿತಿಯು 3-4-1227ರ ಶನಿವಾರವಾಗಿದೆ.

**ಮೊದಲನೆಯ ಸ್ತರ:**

1. @ ಸ್ವಸ್ತಿ ಶ್ರೀಮತು ಕಾದಂಬ ಚಕ್ರವರ್ತ್ತಿ ಮಲ್ಲಿದೇವ [ವ|*]ರ್ಷ-
2. ದ 11ನೆಯ ಸರ್ವ್ವಜಿತು ಸಂವತ್ಸರದ
3. ಚೈತ್ರ ಸು 15 ಬ್ರಿ(ಬೃ)ಹವಾರದ ಮುಖ್ಯ ಯಕ್ಕ
4. ಸಾಹಣಿ ಬಲುವ ಸಾಹಣಿ

**ಎರಡನೆಯ ಸ್ತರ:**

5. ಹಾನುಂಗಲ್ಲ ನಾಡ ಎಡೆವೊಳಲ ಕಂಪ್ಪಣದ ಬಾಳಿಹಳಿ(ಳ್ಳಿ) ಆ
6. ದಾರಿಯ ಬಂದು ಸುತೆಯ ಕೊಂಡು ಹೋಹಲ್ಲಿ
7. ಯಲಂಬಿಯ ಸಾವೆಯನಾಯ್ಕನು ತಳ್ತಿಱಿದು ತುರು(ವ) [ಮಗುಳ್ಚಿ*]
8. ಸುರಲೋಕ ಪ್ರಾಪ್ತನಾದಂ ॥

**ಅಡಿ ಟಿಪ್ಪಣಿಗಳು:**

1. ಹಂಪ ನಾಗರಾಜಯ್ಯ (ಸಂ.), (2006), ರನ್ನ ಸಂಪುಟ-4; ಸಾಹಭೀಮ ವಿಜಯಂ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪದ್ಯ ಸಂಖ್ಯೆ. 2-24
2. ರಮೇಶ್ ಕೆ.ವಿ. (ಸಂ), ಕೊಟ್ರಯ್ಯ ಸಿ.ಟಿ.ಎಂ. (ಲೇ), (1970), ಎ ನೋಟ್ ಆನ್ ದಿ ಟರ್ಮ್ 'ಉಡಿಯುಚ್ಚಿ' ಆಫ್ ದ ಕನ್ನಡ ಇನ್ಸ್ಕ್ರಿಪ್ಷನ್ಸ್, ಜೆ.ಆ.ಎ.ಸೊ.ಇ.ಸಂ., ಸಂಪುಟ-III, ಎ.ಎಸ್.ಐ., ಮೈಸೂರು, ಪು.ಸಂ. 128-134
3. ನಾಗಚಂದ್ರ, (1971), ರಾಮಚಂದ್ರ ಚರಿತ ಪುರಾಣಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪದ್ಯ ಸಂಖ್ಯೆ: 9-144, ಪು.ಸಂ. 248
4. ಮಂಜುನಾಥ್ ಜಿ.ಜಿ. (ಸಂ), (1985), ಚಂದ್ರಪ್ರಭ ಚರಿತೆ: ಚಂದ್ರಿಕಾ ವಿಹಾರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪದ್ಯ ಸಂಖ್ಯೆ: 9-44
5. ಶ್ರೀನಿವಾಸಚಾರ್ ಡಿ. & ರಾಮಸ್ವಾಮಿ ಅಯ್ಯಂಗಾರ್ ಹೆಚ್.ಆರ್., (1930), ಅನಂತನಾಥ ಪುರಾಣಂ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪದ್ಯ ಸಂಖ್ಯೆ: 11-45
6. ಪರಮಶಿವಮೂರ್ತಿ ಡಿ.ವಿ., ( 2010), ಪೆಣ್ಬುಯ್ಯಲ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 2

**ಪರಾಮರ್ಶನ ಗ್ರಂಥಗಳು:**


1. ಕಲಬುರ್ಗಿ ಎಂ.ಎಂ., (1980), ಸಮಾಧಿ–ಬಲಿದಾನ –ವೀರಮರಣ ಸ್ಮಾರಕಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
2. ಚಿದಾನಂದಮೂರ್ತಿ ಎಂ., (1984), ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
3. ಪರಮಶಿವಮೂರ್ತಿ ಡಿ.ವಿ., (2010), ಪೆಣ್ಬುಯ್ಯಲ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ರಮೇಶ್ ಕೆ.ವಿ. (ಸಂ), ಕೊಟ್ರಯ್ಯ ಸಿ.ಟಿ.ಎಂ. (ಲೇ), (1970), ಎ ನೋಟ್ ಆನ್ ದಿ ಟರ್ಮ್ 'ಉಡಿಯುಚ್ಚ಼ಿ' ಆಫ್ ದ ಕನ್ನಡ ಇನ್ಸ್ಕ್ರಿಪ್ಷನ್ಸ್, ಜೆ.ಆ.ಎ.ಸೊ.ಇ.ಸಂ., ಸಂಪುಟ–III, ಎ. ಎಸ್.ಐ., ಮೈಸೂರು.
5. ನಾಗಚಂದ್ರ, (1971), ರಾಮಚಂದ್ರ ಚರಿತ ಪುರಾಣಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
6. ಹಂಪ ನಾಗರಾಜಯ್ಯ (ಸಂ.), (2006), ರನ್ನ ಸಂಪುಟ–4; ಸಾಹಭೀಮ ವಿಜಯಂ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
7. ಮಂಜುನಾಥ್ ಜಿ.ಜಿ. (ಸಂ), (1985), ಚಂದ್ರಪ್ರಭ ಚರಿತೆ: ಚಂದ್ರಿಕಾ ವಿಹಾರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಶ್ರೀನಿವಾಸಚಾರ್ ಡಿ. & ರಾಮಸ್ವಾಮಿ ಅಯ್ಯಂಗಾರ್ ಹೆಚ್.ಆರ್., (1930), ಅನಂತನಾಥ ಪುರಾಣಂ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4. 0 International License.